# ಅಂಗವೈಕಲ್ಯ ಮೆಟ್ಟಿ ನಿಲ್ಲುವ ಛಲ

**ಅಂಗ ವಿಕಲರಾದವರು ಜೀವನದ ಕೊನೆಯವರೆಗೂ ಇನ್ನೊಬ್ಬರನ್ನು ಆಶ್ರಯಿಸಿ ಬದುಕುವಂತಹ ಪರಿಸ್ಥಿತಿ ಈಗ ಇಲ್ಲ. ತಮ್ಮದೇ ಆದ ಉದ್ಯೋಗ, ವೃತ್ತಿಗಳನ್ನು ಮೈಗೂಡಿಸಿಕೊಂಡು ಸ್ವಾವಲಂಬಿಗಳಾಗಿ ಬದುಕಲು ಬಯಸುವವರಿಗೆ ಈಗ ನೂರಾರು ಅವಕಾಶಗಳಿವೆ. ಅಂಗವೈಕಲ್ಯವನ್ನು ಮೆಟ್ಟಿ ನಿಲ್ಲಲು ಸಹಕಾರಿಯಾಗುವ ಸಲಕರಣೆಗಳಿವೆ.**



ಅಂಧರು ಹಾಗೂ ಅಂಗವಿಕಲರಿಗೆ ಎಲ್ಲರಂತೆ ಬದುಕುವ ಹಕ್ಕಿದೆ. ಆದರೆ ನಮ್ಮ ಸಮಾಜ ವ್ಯವಸ್ಥೆ ಬಹಳ ಹಿಂದಿನಿಂದಲೂ ಅವರನ್ನು ಅಸಹಾಯಕರು ಎಂದು ಭಾವಿಸಿ ಅನುಕಂಪದಿಂದ ನೋಡುತ್ತ ಬಂದಿದೆ. ಅಂಧರೂ ಸೇರಿದಂತೆ ಎಲ್ಲಾ ಅಂಗವಿಕಲರು ನಮ್ಮ ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯ ಅಂಗ. ಅವರ ದೈಹಿಕ ಕೊರತೆಗಳಿಂದಾಗಿ ಅವರನ್ನು ಮುಖ್ಯವಾಹಿನಿಯಿಂದ ಹೊರಗಿಟ್ಟು ನೋಡುವಂತಹ ಧೋರಣೆಯನ್ನು ಬಿಟ್ಟು ಅವರಲ್ಲಿರುವ 'ಸಾಮರ್ಥ್ಯ' ಹೊರಬರಲು ಅವಕಾಶವನ್ನು ಕೊಡಬೇಕು ಎಂಬುದು ಈ ಕಾಲದ ಚಿಂತನೆ. ಈ ವಿಷಯದಲ್ಲಿ ಸರ್ಕಾರ ಇದೀಗ ಹೆಚ್ಚು ಆಸಕ್ತಿ ತೋರಿಸುತ್ತಿದೆ. ಅದಕ್ಕೆ ಸಮಾಜವೂ ಸ್ಪಂದಿಸುತ್ತಿದೆ. ಈ ಬೆಳವಣಿಗೆ ಸ್ವಾಗತಾರ್ಹ. ಅಂಧರು ಹಾಗೂ ಇತರ ಅಂಗವಿಕಲರು ತಮಗೆ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ತಮ್ಮ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಮೆರೆದು ಸಮಾಜದ ಗಮನ ಸೆಳೆಯುತ್ತಿದ್ದಾರೆ.

ಹರಿಯಾಣ ರಾಜ್ಯದ ಮಹೇಂದ್ರಗಡ ಜಿಲ್ಲೆಯ ಖೇರಿ ಎಂಬ ಹಳ್ಳಿಯ ಅಜಿತ್‌ಕುಮಾರ್ ಎಂಬುವರು ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಮೂಲಕ ಈಗ ಇಡೀ ದೇಶದ ಗಮನ ಸೆಳೆದಿದ್ದಾರೆ. ಹಾಗೆ ನೋಡಿದರೆ ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರಲ್ಲಿ ಅವರು ಮೊದಲಿಗರಲ್ಲ. ಅದೇ ರಾಜ್ಯದ ಪಂಚಕುಲದ ಸುಖಸೋಹಿತ್ ಸಿಂಗ್ ಎಂಬುವರು 2008ರಲ್ಲಿಯೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಈ ಇಬ್ಬರು ಅಂಧ ವ್ಯಕ್ತಿಗಳು ದೇಶದ ಎಲ್ಲಾ ಅಂಧರಿಗೆ ಮಾದರಿ. ಅವರ ಸಾಧನೆಗೆ ಇಡೀ ದೇಶವೇ ಹೆಮ್ಮೆಪಡುತ್ತದೆ. ಅಷ್ಟೇ ಅಲ್ಲ ಅವರು ಲಕ್ಷಾಂತರ ಜನರಿಗೆ ಪ್ರೇರಕ ವ್ಯಕ್ತಿಗಳು. ಅಂಧತ್ವ ಅವರ ಸಾಧನೆಗೆ ಅಡ್ಡಿ ಆಗಲಿಲ್ಲ. ದೈಹಿಕವಾಗಿ ಸಮರ್ಥರಾದ ಮತ್ತು ಅಪಾರ ಬುದ್ಧಿಮತ್ತೆಯೂ ಇರುವ ಸಾವಿರಾರು ಯುವಕರು ರಾಷ್ಟ್ರ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕುಳಿತುಕೊಳ್ಳುತ್ತಾರೆ. ದೊಡ್ಡ ಸಂಸ್ಥೆಗಳಲ್ಲಿ ತರಬೇತಿ ಪಡೆದು ಪರೀಕ್ಷೆ ಎದುರಿಸಿದರೂ ಅಂತಿಮವಾಗಿ ಸಫಲರಾಗುವವರ ಸಂಖ್ಯೆ ಕಡಿಮೆ. ಇಂತಹ ಪರಿಸ್ಥಿತಿಯಲ್ಲಿ ಅಂಧರಿಬ್ಬರು ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆಂದರೆ ಅದು ಬಹುದೊಡ್ಡ ಸಾಧನೆಯೇ ಸರಿ. ಸತತ ಪರಿಶ್ರಮ, ಅಂಧತ್ವವನ್ನು ಮೆಟ್ಟಿ ನಿಲ್ಲುವ ಅವರ ಛಲ ಪ್ರಶಂಸನೀಯ.

ಅಂಧರು ಮತ್ತು ಇತರ ಅಂಗವಿಕಲರು ಸಂಗೀತ, ಚಿತ್ರಕಲೆ ಮತ್ತು ಸೇವಾವಲಯದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸ್ವಾವಲಂಬಿಗಳಾಗಿ ಬದುಕುತ್ತಿರುವ ಅಸಂಖ್ಯ ಉದಾಹರಣೆಗಳಿವೆ. ವಿವಿಧ ಬಗೆಯ ಅಂಗ ವೈಕಲ್ಯಗಳಿಂದ ತೊಂದರೆಗೆ ಒಳಗಾದವರು ತಮ್ಮಲ್ಲಿರುವ ಪ್ರತಿಭೆ ಮತ್ತು ಬುದ್ಧಿಶಕ್ತಿಯನ್ನು ಬಳಸಿಕೊಂಡು ದೈಹಿಕವಾಗಿ ಸಮರ್ಥರಾದವರ ಜತೆಯಲ್ಲಿ ಪೈಪೋಟಿ ಎದುರಿಸಿ ಯಶಸ್ವಿಯಾದ ಸಾವಿರಾರು ನಿದರ್ಶನಗಳಿವೆ. ಎರಡೂ ಕೈಗಳಿಲ್ಲದ ವಿದ್ಯಾರ್ಥಿಯೊಬ್ಬ ಕಾಲಿನ ಬೆರಳುಗಳಿಂದ ಬರೆಯುವುದನ್ನು ಕಲಿತು ಪರೀಕ್ಷೆ ಎದುರಿಸಿ ಯಶಸ್ವಿಯಾಗುವ, ಅಂಧ ವಿದ್ಯಾರ್ಥಿಗಳು ಬ್ರೈಲ್ ಲಿಪಿಯ ಸಹಾಯದಿಂದ ಅನೇಕ ವೃತ್ತಿಗಳಲ್ಲಿ ತರಬೇತಿ ಪಡೆದು ಬದುಕು ರೂಪಿಸಿಕೊಂಡ ಸಾವಿರಾರು ಯಶೋಗಾಥೆಗಳಿವೆ.

ಹುಟ್ಟುವಾಗಲೇ ಅಂಗ ವೈಕಲ್ಯಕ್ಕೆ ಒಳಗಾದವರು, ಅಪಘಾತ, ಕಾಯಿಲೆ ಮತ್ತಿತರ ಕಾರಣಗಳಿಂದ ಅಂಗ ವಿಕಲರಾದವರು ಜೀವನದ ಕೊನೆಯವರೆಗೂ ಇನ್ನೊಬ್ಬರನ್ನು ಆಶ್ರಯಿಸಿ ಬದುಕುವಂತಹ ಪರಿಸ್ಥಿತಿ ಈಗ ಇಲ್ಲ. ತಮ್ಮದೇ ಆದ ಉದ್ಯೋಗ, ವೃತ್ತಿಗಳನ್ನು ಮೈಗೂಡಿಸಿಕೊಂಡು ಸ್ವಾವಲಂಬಿಗಳಾಗಿ ಬದುಕಲು ಬಯಸುವವರಿಗೆ ಈಗ ನೂರಾರು ಅವಕಾಶಗಳಿವೆ. ಅಂಗವೈಕಲ್ಯವನ್ನು ಮೆಟ್ಟಿ ನಿಲ್ಲಲು ಸಹಕಾರಿಯಾಗುವ ಸಲಕರಣೆಗಳಿವೆ. ಅವರಿಗೆ ಅಗತ್ಯವಾದ ಆತ್ಮವಿಶ್ವಾಸ ತುಂಬುವ ಸಂಸ್ಥೆಗಳಿವೆ. ಆತ್ಮ ವಿಶ್ವಾಸ ಬೆಳೆಸಿಕೊಂಡ ಅನೇಕ ಅಂಧ ಹಾಗೂ ಅಂಗವಿಕಲ ಮಾರ್ಗದರ್ಶಿಗಳೂ ಇದ್ದಾರೆ. ಅಂಗ ವಿಕಲರಿಗೆ ಜೈವಿಕ ಸಹಜ ವಿಶಿಷ್ಟ ಶಕ್ತಿಯೂ ಇದೆ. ಅವರಿಗೆ ಸೂಕ್ತ ಸಮಯದಲ್ಲಿ ಪ್ರೋತ್ಸಾಹ ಸಿಕ್ಕರೆ ಅವರ ಸಾಮರ್ಥ್ಯ ಹೊರಬರಲು ಸಹಾಯವಾಗುತ್ತದೆ ಎಂಬುದಕ್ಕೆ ಹರಿಯಾಣದ ಈ ಇಬ್ಬರು ಐಎಎಸ್ ಪದವೀಧರರೇ ಅತ್ಯುತ್ತಮ ಉದಾಹರಣೆ.

ಇತ್ತೀಚಿನ ಇನ್ನೊಂದು ಮುಖ್ಯ ಬೆಳವಣಿಗೆ ಎಂದರೆ ಸಮಾಜದ ಅವಜ್ಞೆಗೆ ಒಳಗಾದ ಹಿಜಡಾಗಳು ತಮ್ಮ ಹಕ್ಕುಗಳಿಗಾಗಿ ಸಂಘಟಿತ ಹೋರಾಟ ನಡೆಸುತ್ತಿರುವುದು. ತಮಗೂ ಸರ್ಕಾರದ ಹಾಗೂ ಇತರ ಉದ್ಯೋಗಗಳು ಸಿಗಬೇಕು ಎಂಬುದು ಅವರ ಹಕ್ಕೊತ್ತಾಯ. ಅವರ ಬೇಡಿಕೆ ಮನ್ನಣೆ ನೀಡುವ ನಿಟ್ಟಿನಲ್ಲಿ ಒಂದು ಸಣ್ಣ ಹೆಜ್ಜೆ ಇಡಲಾಗಿದೆ. ಬೆಂಗಳೂರಿನ ಹಿಜಡಾ ಒಬ್ಬರಿಗೆ ನ್ಯಾಯಾಂಗ ಇಲಾಖೆ ಉದ್ಯೋಗ ನೀಡಿದೆ. ಹಿಜಡಾಗಳೂ ಸೇರಿದಂತೆ ಇತರ ಲೈಂಗಿಕ ಅಲ್ಪಸಂಖ್ಯಾತರು, ಅಂಧರು, ಇತರ ಅಂಗವಿಕಲರ ಬೌದ್ಧಿಕ ಶಕ್ತಿ ಸಾಮರ್ಥ್ಯ, ಪ್ರತಿಭೆಯನ್ನು ಸಮಾಜದ ಒಳಿತಿಗೆ ಬಳಸಿಕೊಳ್ಳುವ ಪ್ರಯತ್ನ ದೊಡ್ಡ ಪ್ರಮಾಣದಲ್ಲಿ ಆಗಬೇಕಿದೆ.

**■ ಪ್ರೇಮಕುಮಾರ್ ಹರಿಯಬ್ಬೆ**